ಮನವರಿಕೆಯಾಗಿತ್ತು. ಹಾಗಾಗಿ ಆ ಬಡಪಾಯಿಗಳು ಕಂಬನಿಗರೆಯುತ್ತಾ, ಅಮ್ಮನ ಕಾಲಿಗೆರಗಿ ಅಲ್ಲಿಂದ ನಿಧಾನಕ್ಕೆ ಹೊರಡಲುದ್ಯುಕ್ತರಾದರು. ಆಗ ದೇವಿಯನ್ನು ಕೈ ಸನ್ನೆಯಿಂದಲೇ ಸನಿಹ ಕರೆದ ಅಮ್ಮ, ಹಣದ ಕಟ್ಟೊಂದನ್ನು ಆಕೆಯ ಕೈಗಿರಿಸಿ, ಮತ್ತೆ ತಾನೆಲ್ಲಿ ಕರಗಿ ಬಿಡುವೆನೋ ಎಂದು ಅಲ್ಲಿ ನಿಲ್ಲದೆ ಸೀದಾ ಮನೆಯೊಳಗೆ ನಡೆದುಬಿಟ್ಟರು.

ಏಕಾಏಕಿ ನೆಲೆ ತಪ್ಪಿದ ಮತ್ತು ಪ್ರೀತಿಯ ಒಡೆಯನ ಅನುಪಸ್ಥಿತಿಯಲ್ಲಿ ನಡೆದುಹೋದ ಈ ಗಡಿಪಾರು ಆದೇಶದಿಂದ ಜರ್ಝರಿತರಾದ ದೇವಿ ಮತ್ತು ಸೋಮ ಕಣ್ಣೀರಿಡುತ್ತಾ ಬಿಡಾರದತ್ತ ಕಾಲೆಳೆದರು.

★★★

ಹತ್ತು ದಿನ ಕಳೆದು ಊರಿಗೆ ಮರಳಿದ ವಾಸುದೇವರಿಗೆ ಆಘಾತ ಕಾದಿತ್ತು!

ದಿನವಿಡೀ ಸೋಮ ಮತ್ತು ದೇವಿಯ ಸುಳಿವಿಲ್ಲದ್ದನ್ನು ಗಮನಿಸಿ ಅವರ ಗುಡಿಸಲಿನತ್ತ ಹೋದವರಿಗೆ ಗುಡಿಸಲೆದುರಿಗೆ ಒಡೆದು ಹೋದ ಮಡಿಕೆ, ಕುಡಿಕೆಗಳು, ಹರಿದು ಚೂರಾದ ಬಟ್ಟೆಬರೆಗಳು ಮತ್ತು ಜೀವವೇ ಹೊರಟುಹೋದಂತಿರುವ ಖಾಲಿ ಗುಡಿಸಲನ್ನು ಕಂಡು ದಂಗು ಬಡಿದಂತಾಯಿತು! ಅವರಲ್ಲಿ ನಿಂತಿರುವುದನ್ನು ದೂರದಲ್ಲಿ ಕೆಲಸಮಾಡುತ್ತಿದ್ದ ಆಳೊಬ್ಬ ಕಂಡು ಹತ್ತಿರ ಬಂದವನೇ ಒಡೆಯನ ಮನದ ಗೊಂದಲ ಗೊತ್ತಾದಂತೆ,

